**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 5288/2022**

**ಸಾಕ್ಷಿಗೆ ದಿನಾಂಕ 22.1.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸಣ್ಣಸ್ವಾಮಿನಾಯಕ | ಪಿ.ಡಬ್ಲ್ಯೂ-2 |
| ತಂದೆಯ/ಗಂಡನ ಹೆಸರು | : | ಚಾಮನಾಯಕ | ಸಿ.ಡಬ್ಲ್ಯೂ-1 |
| ವಯಸ್ಸು | : | 70 | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ಆಲನಹಳ್ಳಿ | |

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸ4 ನನ್ನ ಹೆಂಡತಿ, ಚಾಸ5 ನನ್ನ ತಮ್ಮ, ಚಾಸ6 ನನ್ನ ಮಗ. ನನಗೆ ಚಾಸ2, 3 ಹಾಗೂ 8 ರಿಂದ 12 ರವರ ಪರಿಚಯವಿರುತ್ತದೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿರುತ್ತೇನೆ. ನಮ್ಮ ಮನೆಯ ಪಕ್ಕದಲ್ಲಿ ಸಣ್ಣತಾಯಮ್ಮ ರವರ ಮನೆ ಇರುತ್ತದೆ. ಚರಂಡಿಯ ನೀರು ನಮ್ಮ ಮನೆ ಕಡೆಯಿಂದ ಸಣ್ಣತಾಯಮ್ಮ ರವರ ಮನೆ ಕಡೆ ಹರಿದುಹೋಗುತ್ತದೆ. ದಿನಾಂಕ 24.10.2019 ರಂದು ಮದ್ಯಾಹ್ನದ ಸಮಯದಲ್ಲಿ ಸಣ್ಣತಾಯಮ್ಮ ಹಾಗೂ ಚಾಸ4 ರವರ ನಡುವೆ ಚರಂಡಿ ನೀರಿನ ವಿಚಾರವಾಗಿ ಸಣ್ಣಪುಟ್ಟ ಗಲಾಟೆಯಾಗಿರುತ್ತದೆ. ದಿನಾಂಕ 25.10.2019 ರಂದು ಸಂಜೆ 5 ಗಂಟೆಯ ಸಮಯದಲ್ಲಿ ನಾನು ಚಾಸ4 ರವರು ಮನೆ ಹತ್ತಿರದ ಸೈಟಿನಲ್ಲಿ ದನಗಳನ್ನು ಕಟ್ಟುತ್ತಿದ್ದಾಗ ಸಣ್ಣತಾಯಮ್ಮನ ಮಗನಾದ ಕೆಂಡಗಣ್ಣಸ್ವಾಮಿ ಮತ್ತು 8-10 ಜನರು ಜೊತೆಯಲ್ಲಿ ಬಂದು ನನಗೆ ಅವಾಚ್ಯ ಶಬ್ದಗಳಿಂದ ಬೈದು ಕಾಲಿನಿಂದ ನನ್ನ ಎದೆಗೆ ಒದ್ದಿರುತ್ತಾರೆ. ನಾನು ಕೆಳಗಡೆ ಬಿದ್ದಾಗ 1 ನೇ ಆರೋಪಿಯು ಶೂಕಾಲಿನಿಂದ ಮೈಕೈಗೆ ಒದ್ದಿರುತ್ತಾನೆ. ನಂತರ ಗಲಟೆ ಬಿಡಿಸಲು ಬಂದ ಚಾಸ4 ರವರಿಗೆ 1 ನೇ ಆರೋಪಿಯು ರವಿಕೆಯನ್ನು ಹರಿದು ಹಾಕಿ ಮಾನಭಂಗ ಮಾಡುತ್ತೇನೆ ಎಂದು ಹೇಳಿರುತ್ತಾರೆ. ನಂತರ ಗಲಾಟೆ ಶಬ್ದ ಕೇಳಿ ಚಾಸ5 ರವರು ಬಿಡಿಸಲು ಬಂದಾಗ 1 ನೇ ಆರೋಪಿ ಮತ್ತು ಅವರ ಜೊತೆ ಬಂದಿದ್ದ ವ್ಯಕಿಗಳು ಚಾಕುವಿನಿಂದ ಬಲಗಾಲಿಗೆ ಹೊಡೆದು ಗಾಯ ಉಂಟು ಮಾಡಿರುತ್ತಾರೆ. ನಂತರ ಚಾಸ7 ರಿಂದ 10 ರವರು ಸ್ಥಳಕ್ಕೆ ಬಂದು ಗಲಾಟೆಯನ್ನು ಬಿಡಿಸಿರುತ್ತಾರೆ. ನಂತರ ಚಾಸ9 ಮತ್ತು ಇನ್ನೊಬ್ಬರು ನನ್ನನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರಿಂದ ದಿನಾಂಕ

26.10.2019 ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸಾಕ್ಷಿದಾರರು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ1 ಎಂದು, ಸಾಕ್ಷಿಯ ಸಹಿಯನ್ನು ನಿಪಿ1 ಎ ಎಂದು ಗುರುತಿಸಲಾಯಿತು. ನಾನು ದೂರು ನೀಡಿದ ಮರುದಿನ ಹೆಚ್.ಡಿ.ಕೋಟೆ ಪೋಲಿಸರು ನಾನು ತೋರಿಸಿದ ಘಟನಾ ಸ್ಥಳವನ್ನು ಚಾಸ2 ಮತ್ತು 3 ರವರ ಸಮಕ್ಷಮ ಪರಿಶೀಲಿಸಿ ಚಾಸ4 ರವರು ಧರಿಸಿದ್ದ ಸೀರೆ, ರವಿಕೆ ಹಾಗೂ ಕೃತ್ಯಕ್ಕೆ ಉಪಯೋಗಿಸಿದ ಚಾಕುವನ್ನು ಅಮಾನತ್ತುಪಡಿಸಿಕೊಂಡು ಮಧ್ಯಾಹ್ನ 12 ರಿಂದ 1 ಗಂಟೆವರೆಗೆ ನಿಪಿ1ರಂತೆ ಮಹಜರು ಮಾಡಿರುತ್ತಾರೆ. ನಿಪಿ1ರಲ್ಲಿರುವ ಸಾಕ್ಷಿಯನ್ನು ನಿಪಿ1 ಬಿ ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಚಾಕು, ರವಿಕೆ ಮತ್ತು ಸೀರೆಯನ್ನು ಸದರಿ ದಿನ ಪೋಲಿಸರು ಅಮಾನತ್ತುಪಡಿಸಿಕೊಂಡಿರುತ್ತಾರೆ. ಅವುಗಳನ್ನು ಎಂಓ1 ರಿಂದ 3 ಎಂದು ಗುರುತಿಸಲಾಯಿತು. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರು ಸದರಿ ದಿನ ಕೃತ್ಯ ಎಸಗಿದ ವ್ಯಕ್ತಿಗಳಾಗಿರುತ್ತಾರೆ.

(ಈ ಹಂತದಲ್ಲಿ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)

<u>ಪಾಟೀಸವಾಲುಃ ಎಪಿಪಿ ರವರಿಂದಃ</u>

ಸದರಿ ದಿನ ಆರೋಪಿತರು ಸ್ಥಳದಿಂದ ಹೋಗುವಾಗ ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ದಿನಾಂಕ 26.10.2019 ರಂದು ಪೋಲಿಸರ ಮುಂದೆ 1 ನೇ ಆರೋಪಿಯ ಜೊತೆ 2 ನೇ ಆರೋಪಿಯು ಬಂದು ಗಲಾಟೆ ಮಾಡಿರುವುದಾಗಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಅಲ್ಲದೇ ಗಲಾಟೆ ಬಿಡಿಸಲು ಬಂದಾಗ ಚಾಸ4 ರವರ ಸೀರೆ ಹರಿದುಹೋಗಿರುತ್ತದೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಒಪ್ಪಿಕೊಳ್ಳದ ಹೇಳಿಕೆಯ ಭಾಗವನ್ನು ನಿಪಿ3 ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಆರೋಪಿತರ ಪರ ವಕೀಲರು ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ